ಯೋಚನೆಯನ್ನೂ ಒಮ್ಮೆ ಮಾಡಿದ. ಅದನ್ನೇ ದಿಟ್ಟಿಸಿ ನೋಡಿದ. ಇಂಥ ಒಂದು ಸುಂದರ, ಬೆಲೆ ಬಾಳುವ ವಸ್ತುವಿನ ಒಡೆಯನಾಗುವ ಯೋಚನೆ ಅವನನ್ನು ರೋಮಾಂಚನಗೊಳಿಸಿತು. ಈ ಕನಸು ತಕ್ಷಣ ನನಸಾಗುವ ಸಾಧ್ಯತೆ ಇತ್ತು. ಆದರೆ, ಅದನ್ನು ತೆಗೆದುಕೊಂಡು ಹೋಗುವುದಾದರೂ ಎಲ್ಲಿಗೆ? ಅವನಿಗೆ ಮನೆಯೇ ಇರಲಿಲ್ಲ.

ರೊಸಾಲಿಯ ಗಂಡನ ಹೆಗಲ ಮೇಲೆ ತಲೆಯನ್ನಿಟ್ಟು ಕಣ್ಣೀರನ್ನು ತಡೆಹಿಡಿಯಲು ಶ್ರಮಿಸುತ್ತಿದ್ದಳು.

'ಆಹ್, ಯಾವ್ವೋ, ಎಂಥ ನಿರ್ಧಾರ ಮಾಡಿದೆ!'

'ಯಾರಿಗೂ ಅದು ಬೇಡದಿದ್ದರೆ, ಮತ್ತೆ ಅದು ಇಲ್ಲಿ ಇರಬಾರದೆಂದಿದ್ದರೆ...'

'ಗೊತ್ತು ಯಾವ್ವೊ, ಆದರೆ ಬೇಸರಿಸದೇ ಇರಲು ನನ್ನಿಂದ ಸಾಧ್ಯವಿಲ್ಲ. ಎಷ್ಟು ಸಮಯದಿಂದ ಅದು ನಮ್ಮಲ್ಲಿದೆ! ಇಷ್ಟು ವರ್ಷಗಳ ನಂತರ ಅದನ್ನು ಸಮುದ್ರಕ್ಕೆ ಎಸೆಯುವುದೆಂದರೆ ಕ್ರೂರತನ ಅನ್ನಿಸಲ್ವ? ಒಮ್ಮೆ ನೋಡು ಅದನ್ನು, ತನಗೇನಾಗಬಹುದೆಂಬ ಅರಿವೆಯೇ ಇಲ್ಲದೇ ನಿಂತಿದೆ ನೋಡು, ಆ ಮೂಲೆಯಲ್ಲಿ, ಯಾರಿಗೂ ತೊಂದರೆ ಕೊಡದೆ, ಇಪ್ಪತ್ತು ವರ್ಷಗಳಿಂದ ಅದು ಅಲ್ಲಿದೆಯಲ್ಲ....'

'ನಾವು ಭಾವುಕರಾಗಬಾರದು, ರೊಸಾಲಿಯ.'

ಆಕೆ ಅವನನ್ನು ಮೆಚ್ಚುಗೆಯಿಂದ ನೋಡಿದಳು.

'ಆಯಿತು ಯಾವ್ವೋ, ನಿನಗೆ ಖುಷಿ ಕಂಡ ಹಾಗೆ ಮಾಡು.'

ಪಿಂಟೋ ಮತ್ತು ಲಾತೊಲಾಂಡಿಯಾದ ಗುಡಿಸಲುಗಳಿಂದ ಹರಕು ಚಿಂದಿಯುಟ್ಟ, ಆದರೆ ಆನಂದದಿಂದ ಇರುವ ನೀಗ್ರೋ ಹುಡುಗರ ಗುಂಪುಗಳು ಹೊರಗೆ ಬಂದು ತಮ್ಮ ಹತ್ತಿರದ ಶ್ರೀಮಂತ ನೆರೆಕರೆಗಳಲ್ಲಿ ಅಡ್ಡಾಡುತ್ತಿದ್ದರು. ಐಸ್‌ಕ್ರೀಮ್‌ಗಳಿಗಾಗಿ ಚಿಲ್ಲರೆ ಹಣ ಬೇಡುತ್ತಾ, ಸಿನಿಮಾ ಮಂದಿರಗಳ ಹೊರಗೆ ಅಂಟಿಸಿದ ಚಿತ್ರಗಳನ್ನು ತದೇಕ ದೃಷ್ಟಿಯಿಂದ ಈಕ್ಷಿಸುತ್ತಾ, ಅಥವಾ ಲ್ಯಾಬ್ಲೋನ್‌ನ ಮರಳಿನ ಮೇಲೆ ಹೊರಳಾಡುತ್ತಾ ಇರುವ ಅವರನ್ನು ಸದಾ ನೋಡಬಹುದಿತ್ತು.

ಅಂದು ಬೆಳಗ್ಗೆ ಅಟ್ಲಾಂಟಿಕ್ ಸಮುದ್ರ ಘೀಳಿಡುತ್ತಿತ್ತು. ಎಂದಿನಂತೆ ಪಿಯಾನೊ ನಿರಾತಂಕವಾಗಿ ನಿಂತಿತ್ತೆಂದು ಹೇಳಬೇಕಾಗಿಲ್ಲ. ಅದರ ಅಂಚು ಪಳಪಳ ಹೊಳೆಯುತ್ತಿತ್ತು.

ಅದರ ವಿದಾಯದ ಸಿದ್ಧತೆ ನಡೆದಿತ್ತು. ಯಾವ್ವೊ ದೆ ಒಲಿವೈರಾ ತನ್ನ ಹೆಂಡತಿಗೂ ಮಗಳಿಗೂ ಉಪಯೋಗಕ್ಕೆ ಬರುವ ಅದರ ಭಾಗಗಳನ್ನು ತೆಗೆದಿಡಲು ಹೇಳಿದ್ದ. ಅವರು ಅದರ ಹಿತ್ತಾಳೆಯ ಕೀಲಿಗಳನ್ನು ಬಿಚ್ಚಿದ್ದರು. ಆ ಮೇಲೆ ಕಾಲಿನಿಂದ ಒತ್ತುವ ಮಣೆಗಳನ್ನೂ, ಲೋಹದ ಅಲಂಕಾರಿಕ ಭಾಗಗಳನ್ನೂ, ಕೊನೆಗೆ ಓಕ್ ಮರದ ಹಲಗೆಯನ್ನೂ ತೆಗೆದಿರಿಸಿದ್ದರು.

'ಸಾರಾ ಉಹ್, ಅದೀಗ ಬೇರೆಯೇ ಆಗಿ ಕಾಣುತ್ತಿದೆ' ಎಂದು ಉದ್ಗರಿಸಿದಳು.

ಮನೆಯವರಿಗೆ ಹೇಳದೇ ಯಾವ್ವೊ ದೆ ಒಲಿವೈರಾ ನೀಗ್ರೋ ಹುಡುಗರ ಒಂದು ತಂಡವನ್ನು ನೇಮಿಸಿಕೊಂಡಿದ್ದ. ಬಾಗಿಲ ಹೊರಗೆ ಅವರು ಉತ್ಕಂಠತೆಯಿಂದ ಕಾಯುತ್ತಿದ್ದರು. ಒಲಿವೈರಾ ಮೊದಲು ಅವರಲ್ಲಿ ಗಟ್ಟಿಮುಟ್ಟಾಗಿದ್ದವನನ್ನು ಮುಂದೆ ಮಾಡಿ ಒಳಗೆ ಬರ ಮಾಡಿದ.

ಸಂಜೆಯ ನಾಲ್ಕು ಗಂಟೆಯ ನಂತರ ಶವಯಾತ್ರೆ ಹೊರಗೆ ಬಿದ್ದಿತು. ಕಾಲುದಾರಿಯ ಮೇಲಿದ್ದ ಒಂದು ಸಣ್ಣ ಗುಂಪು ಅವರಿಗೆ ದಾರಿ ಮಾಡಿಕೊಟ್ಟಿತು. ಪಿಯಾನೊ ನಿಧಾನವಾಗಿ, ಆದರೆ ಅನಿಯಮಿತವಾಗಿ ಮುಂದುವರಿಯಿತು. ದಾರಿಯಲ್ಲಿದ್ದ ಕೆಲವರು ಹತ್ತಿರ ಬಂದು ಅದನ್ನು ನೋಡಿದರು. ರೊಸಾಲಿಯ ಮತ್ತು ಅವಳ ಮಗಳು ಕೈಸಾಲೆಯಲ್ಲಿ ಒಬ್ಬರ ಹೆಗಲ ಮೇಲೆ ಒಬ್ಬರು ಕೈ ಇಟ್ಟು ವಿಷಾದದಿಂದ ನೋಡಿದರು. ಅದರ ಜೊತೆ ನಡೆಯುವುದು ಅವರಿಂದ ಸಾಧ್ಯವಾಗಲಿಲ್ಲ. ಅಡುಗೆಯವಳು ತನ್ನ ಸೆರಗಿನಿಂದ ಕಣ್ಣೊರಸಿಕೊಂಡಳು.

ಬೀದಿಯ ತಿರುವಿಗೆ ಬಂದು ಮುಟ್ಟಿದಾಗ ನೀಗ್ರೋ ಹುಡುಗರು 'ಯಾವ ಕಡೆಗೆ?' ಎಂದು ಕೇಳಿದರು. ಎಲ್ಲರೂ ಅದನ್ನು ಒಟ್ಟಿಗೆ ಹಿಡಿದುಕೊಂಡಿದ್ದುದರಿಂದ ಪಿಯಾನೊ ಬೀಳುವಂತಾಯಿತು. 'ಸಮುದ್ರದ ಕಡೆಗೆ' ಎಂದು ಯಾವ್ವೊ ದೆ ಒಲಿವೈರಾ, ಒಬ್ಬ ನೌಕಾಧಿಕಾರಿಯ ಗತ್ತಿನಲ್ಲಿ ಅಟ್ಲಾಂಟಿಕ್‌ದತ್ತ ಬೆರಳು ತೋರಿಸಿದ.

ಎಲ್ಲ ಹುಡುಗರೂ 'ಸಮುದ್ರದ ದಡಕ್ಕೆ! ಸಮುದ್ರದ ದಡಕ್ಕೆ!' ಎಂದು ಒಟ್ಟಿಗೆ ಒಬ್ಬರಿಗೊಬ್ಬರು